ಈ) ಜನರಲ್ ಹಾಸ್ಪೆಲ್‌ಗಳಲ್ಲಿಯ ಫೋನುಗಳ ವಾರ್ಷಿಕ ಸ್ಥಳೀಯ ಕಾಲುಗಳ ಸಂಖ್ಯೆ ಎಷ್ಟು ಹಾಗೂ ಪ್ರತಿ ವರ್ಷ ಬಾಡಿಗೆ ಹಾಗೂ ಫೋನುಗಳ ಕಾಲುಗಳಿಗಾಗಿ ತುಂಬಿರುವ ಹಣ ಎಷ್ಟು ? ೧೯೮೫–೮೬ ರಿಂದ ಮೂರು ವರ್ಷದ ವಿವರ ನೀಡುವುದು ?

ಉ) ದೂರವಾಣಿಯವರ ಯಾಂತ್ರೀಕರಣದಿಂದಾಗಿಯೇ ಎಷ್ಟು ಹಣ ವಿನಾಕಾರಣ ತುಂಬಿತ್ತಿರುವುದರ ಬಗ್ಗೆ ವಿನಾದರೂ ವಿವರಣೆ ನೀಡುವಿರಾ ? ಹಾಗಾದರೆ ಕ್ರಮ ವನಾದರೂ ತೆಗೆದುಕೊಂಡಿದಿರಾ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಮಂತ್ರಿಗಳು). –

ಅ) ಒಟ್ಟು ೭೪.

ಆ) ಪೈವೈಟ್ ಬಾಂಚ್ ಎಕ್ಸ್‌ಚೆಂಜ್ (ಪಿ ಬಿ ಎಕ್ಸ್) ಫೋನುಗಳ ಸಂಖ್ಯೆ ೯–ನಂ. ೭೩೧೪೧೧ರಿಂದ ೭೩೧೪೯ ಎಕ್ಸ್‌ಟೆನೆಷನ್ಸ್ ೭೮.

ಇ) ಫೋನುಗಳ ಕಾರ್ಯ ನಿರ್ವಹಣೆಯಲ್ಲಿ ಅತಿಥಿಗಳಿಂದ ಬರುವ ದೂರುಗಳ ಬಗ್ಗೆ ಆಗಿಂದಾಗ್ಗೆ ಬೆಂಗಳೂರು ದೂರವಾಣಿ ಕೇಂದ್ರಕ್ಕೆ ದೂರುಗಳನ್ನು ಕೊಟ್ಟು ತಕ್ಷಣ ಕ್ರಮ ತೆಗೆದುಕೊಂಡು ಸರಿಪಡಿಸಲಾಗಿರುತ್ತದೆ.

ಈ) ಸ್ಥಳೀಯ ಫೋನು ಕಾಲುಗಳಿಗಾಗಿ ಮತ್ತು ಬಾಡಿಗೆ ತುಂಬಿರುವ ಹಣ

ವರ್ಷಗಳು	ಸ್ಥಳೀಯ ಕರೆಗಳ ಸಂಖ್ಯೆ	ಸ್ಥಳೀಯ ಕರೆಗಳಿಗಾಗಿ ತುಂಬಿರುವ ಹಣ	ಬಾಡಿಗೆಗಾಗಿ ತುಂಬಿರುವ ಹಣ,
೧೯೮೫–೮೬	೧ ೦೫೫.೩೮೩	೩೭,೧೯೯–೦೦	೮,೮೧೫–೦೦
೧೯೮೬–೮೭	೧,೦೨,೩೪೩	೫೧,೪೭೦–೦೦	೮,೨೬೫- ೦೦
೧೯೮೭-೮೮	೬೦,೫೭೩	೫೭,೭೧೮–೦೦	೯,೬೯೫–೦೦

ಉ) ಯಾಂತ್ರೀಕರಣದಿಂದ ಅಡಚಣೆ ಆದರೆ ದೂರವಾಣಿ ಇಲಾಖೆಯವರೇ ರಿಪೇರಿ ಮಾಡುತ್ತಾರೆ. ಆದಕಾರಣ ಸರ್ಕಾರದಿಂದ ಈ ಬಗ್ಗೆ ಹಣ ಖರ್ಚಾಗುತ್ತಿಲ್ಲ, ಕ್ರಮ ತೆಗೆದುಕೊಳ್ಳುವ ವಿಚಾರ ಉದ್ಭವಿಸುವುದಿಲ್ಲ.

ಗೋಕಾಕ್ ತಾಲ್ಲೂಕಿದಲ್ಲಿ ಬರುವ ಘಟ ಪ್ರಭ ನದಿ ಪ್ರವಾಹಕ್ಕೆ ಒಳಪಡುವ ಹಳ್ಳಿಗಳ ವಿಷಯ

೪೧೭ (೫೪೬) ಶ್ರೀ ಆರ್. ಎಂ. ಪಾಟೀಲ್, (ಅರಭಾವಿ). – ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ. –

ಅ) ಗೋಕಾಕ್ ತಾಲ್ಲೂಕಿನಲ್ಲಿ ಹರಿದು ಹೋಗುವ ಘಟಪ್ರಭಾ ನದಿ ಎರಡೂ ಕಡೆಗಳಲ್ಲಿ ಎಷ್ಟು ಹಳ್ಳಿಗಳಿವೆ ?

ಆ) ಸದರಿ ಹಳ್ಳಿಗಳ ಪೈಕಿ ಎಷ್ಟು ಹಳ್ಳಿಗಳು ಘಟಪ್ರಭಾ ನದಿಯ ಪ್ರವಾಹಕ್ಕೆ ತುತ್ತಾಗುತ್ತವೆ ?

ಇ) ಪ್ರವಾಹಕ್ಕೆ ಒಳಗಾಗುತ್ತಿರುವ ಹಳ್ಳಿಗಳ ಸ್ಥಳಾಂತರ ಕುರಿತು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ. ಮತ್ತು ಈಗ ಆ ವಿಷಯ ಯಾವ ಹಂತದಲ್ಲಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು). –

ಅ) ೫೧.

ಆ) ೬.

ಇ) ಈ ಹಳ್ಳಿಗಳ ಸ್ಥಳಾಂತರಕ್ಕೆ ಭೂ ಸ್ವಾಧೀನ ಕ್ರಮ ಪೂರ್ಣಗೊಂಡಿದೆ.